ಓ ಎಸ್ ನಂ.36/2023

ಪಿ.ಡಬ್ಲ್ಯೂ-1 ನಿರ್ಮಲಾ ಗಂಡ ದತ್ತು ವಾಘ್ಮೋರೆ

**(ಇಂದು ದಿನಾಂಕಃ 10-10-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)**

ಪಾಟೀ ಸವಾಲುಃ ೫ನೇ ಪ್ರತಿವಾದಿ ಪರ ಶ್ರೀ ಎಸ್ ಜಿ ಎ ವಕೀಲರಿಂದ.

ನನ್ನ ತಂದೆಯ ಹೆಸರು ಮಹಾದೇವ್ ಇರುತ್ತದೆ. ನನ್ನ ಅಜ್ಜನ ಹೆಸರು ಮಾಲು ಬಂಡಗರ ಎಂದು ಇರುತ್ತದೆ. ನನ್ನ ತಂದೆಗೆ ಸುಗಲಾಬಾಯಿ, ಗಂಗಾಬಾಯಿ, ಶಾಂತಾಬಾಯಿ ಎಂಬ ೩ ಜನ ಸಹೋದರಿಯರು ಇರುತ್ತಾರೆ. ನನ್ನ ತಂದೆಗೆ ಸಹದೇವ್ ಮತ್ತು ಭೀಮಶಾ ಎಂಬ ೨ ಜನ ಸಹೋದರರು ಇರುತ್ತಾರೆ. ನನ್ನ ಅಜ್ಜನಿಗೆ ಒಟ್ಟು ೧೨ ಎಕರೆ ಜಮೀನು ಇತ್ತು. ಸದರಿ ಜಮೀನಿನ ಸರ್ವೆ ನಂಬರ ನನಗೆ ಗೊತ್ತಿಲ್ಲ. ಭೀಮಶಾರವರ ಪಾಲಿಗೆ ೬ ಎಕರೆ ಜಮೀನು, ಸಹದೇವ್ ರವರ ಪಾಲಿಗೆ ೬ ಎಕರೆ ಜಮೀನು ಮತ್ತು ನಮ್ಮ ತಂದೆ ಮಹಾದೇವ್ ರವರಿಗೆ ೬ ಎಕರೆ ಜಮೀನು ಪಾಲಿಗೆ ಬಂದಿರುತ್ತವೆ. ಸದರಿ ೩ ಪಾಲುಗಳು ಒಂದೆ ಜಮೀನಿನಲ್ಲಿ ಆಗಿರುತ್ತವೆ ಎಂದರೆ ಸರಿ. ಸದರಿ ಜಮೀನಿನ ಸರ್ವೆ ನಂಬರ ೧೯೨ ಎಂದು ಇರುತ್ತದೆ ಎಂದರೆ ಸರಿ. ನನ್ನ ಮದುವೆ ಆಗಿ ಈಗ ಸುಮಾರು ೪೦ ವರ್ಷಗಳಾಗಿರುತ್ತವೆ. ನನ್ನ ಗಂಡನ ಹೆಸರು ದತ್ತು ವಾಘ್ಮೋರೆ ಎಂದು ಇರುತ್ತದೆ. ನನ್ನ ಗಂಡನ ಊರು ಆಳಂದ ತಾಲೂಕಿನ ಬೂಸನೂರ ಗ್ರಾಮ ಆಗಿರುತ್ತದೆ. ನನ್ನ ಮದುವೆ ಆದಾಗಿನಿಂದ ನಾನು ನನ್ನ ಗಂಡನ ಜೊತೆಗೆ ಬೂಸನೂರ ಗ್ರಾಮದಲ್ಲಿ ವಾಸವಿರುತ್ತೇನೆ ಎಂದರೆ ಸರಿ.

೨. ನಾನು ಶಾಲೆ ಕಲಿತಿಲ್ಲ. ನಾನು ಕೂಲಿ ಕೆಲಸ ಮಾಡುತ್ತೇನೆ. ನನ್ನ ತಂದೆ ಮಹಾದೇವ್ ರವರಿಗೆ ಶೋಭಾ, ಛಾಯಾ ಮತ್ತು ನಿರ್ಮಲಾ ಎಂಬ ೩ ಜನ ಹೆಣ್ಣುಮಕ್ಕಳು

ಮತ್ತು ಉಮೇಶ ಮತ್ತು ಮಾಲು ಎಂಬ ೨ ಜನ ಗಂಡು ಮಕ್ಕಳು ಇರುತ್ತೇವೆ. ನನ್ನ ಸಹೋದರಿ ಛಾಯರವರ ಮದುವೆಯಾಗಿ ಸುಮಾರು ೨೦ ರಿಂದ ೨೫ ವರ್ಷಗಳಾಗಿರಬಹುದು. ಸದರಿ ಛಾಯಾರವರನ್ನು ಉಮರ್ಗಾ ತಾಲೂಕಿನ ಕೋರಲಾ ಗ್ರಾಮಕ್ಕೆ ಮದುವೆ ಮಾಡಿ ಕೊಟ್ಟಿರುತ್ತಾರೆ. ಛಾಯಾರವರೂ ಕೂಡಾ ಶಾಲೆ ಕಲಿತಿಲ್ಲ. ಅವರೂ ಕೂಡಾ ಕೂಲಿ ಮಾಡಿಕೊಂಡು ಇರುತ್ತಾರೆ ಎಂದರೆ ಸರಿ. ಛಾಯಾರವರನ್ನು ಮದುವೆ ಮಾಡಿಕೊಟ್ಟಾಗಿನಿಂದ ಅವರು ತಮ್ಮ ಗಂಡನ ಮನೆಯಲ್ಲಿಯೆ ಇರುತ್ತಾರೆ ಎಂದರೆ ಸರಿ.

೩. ನನ್ನ ಸಹೋದರಿಯಾದ ಶೋಭಾರವರ ಮದುವೆ ಆಗಿ ಸುಮಾರು ೨೨ ವರ್ಷಗಳಾಗಿರುತ್ತವೆ. ಮದುವೆಯಾದಾಗಿನಿಂದ ಶೋಭಾರವರು ತಮ್ಮ ಗಂಡನ ಮನೆಯಲ್ಲಿಯೆ ಇರುತ್ತಾರೆ ಎಂದರೆ ಸರಿ. ಶೋಭಾ ಕೂಡಾ ಕೂಲಿ ಕೆಲಸ ಮಾಡುತ್ತಾರೆ. ನನ್ನ ತಮ್ಮ ಉಮೇಶರವರ ಹೆಂಡತಿಯ ಹೆಸರು ಸುಜಾತಾ ಎಂದು ಇರುತ್ತದೆ. ಸದರಿ ಸುಜಾತಾರವರು ನನ್ನ ಸಹೋದರಿಯಾದ ಛಾಯಾಬಾಯಿರವರ ಮಗಳು ಎಂದರೆ ಸರಿ. ನಮ್ಮ ತಂದೆಯ ಪಾಲಿಗೆ ಬಂದ ೬ ಎಕರೆ ಜಮೀನನ್ನು ನಮ್ಮ ತಂದೆ ಮಹಾದೇವ್ ರವರೆ ಸಾಗುವಳಿ ಮಾಡುತ್ತಿದ್ದಾರೆ. ಈಗ ನನ್ನ ಸಹೋದರರಾದ ಮಾಲು ಮತ್ತು ಉಮೇಶರವರ ಹೆಸರಿನಲ್ಲಿ ತಲಾ ೬ ಎಕರೆ ಜಮೀನುಗಳಿರುತ್ತವೆ. ಸಾಕ್ಷಿಯು ನಮ್ಮ ಕಾಕ ಭೀಮಶಾರವರಿಂದ ನಮ್ಮ ತಾಯಿ ಮತ್ತು ತಂದೆರವರು ೬ ಎಕರೆ ಜಮೀನು ಖರೀದಿ ಮಾಡಿರುತ್ತಾರೆ ಎನ್ನುತ್ತಾರೆ. ಸುಮಾರು ೪೦ ವರ್ಷಗಳ ಹಿಂದೆ ಆ ರೀತಿ ಜಮೀನು ಖರೀದಿ ಮಾಡಿರುತ್ತಾರೆ. ಸದರಿ ಖರೀದಿ ಪತ್ರ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

೪. ನನ್ನ ಸಹೋದರರಾದ ೩ ಮತ್ತು ೪ನೇ ಪ್ರತಿವಾದಿಗಳಾದ ಮಾಲು ಮತ್ತು ಉಮೇಶರವರಿಗೆ ನಮ್ಮ ತಂದೆ ಮತ್ತು ತಾಯಿ ಜಮೀನು ಮುಟೇಷನ್ ಮಾಡಿಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ತಂದೆ-ತಾಯಿಯನ್ನು ನೋಡದ ಕಾರಣ ನಾವು ನಮಗೂ ಕೂಡಾ ಪಾಲು ಬೇಕು ಎಂದು ಕೇಸು ಹಾಕಿರುತ್ತೇವೆ. ನಮ್ಮ ತಂದೆ-ತಾಯಿ ಈಗ ೪ನೇ ಪ್ರತಿವಾದಿ ಉಮೇಶರವರ ಹತ್ತಿರ ಇರುತ್ತಾರೆ ಎಂದರೆ ಸರಿ. ನಮ್ಮ ಮನೆಯಲ್ಲಿ ಪಾಲು ಮಾಡಿ, ೩ ಮತ್ತು ೪ನೇ ಪ್ರತಿವಾದಿಗಳಿಗೆ ಜಮೀನು ನೀಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು ನಮ್ಮ ತಂದೆ-ತಾಯಿಯನ್ನು ನೋಡದ ಕಾರಣ ನಾವು ಕೇಸು ಹಾಕಿರುತ್ತೇವೆ ಎನ್ನುತ್ತಾರೆ. ಮೊದಲು ಪಾಲು ಆಗುವಾಗ ನಾನು ಯಾವುದೆ ಪಾಲು ಕೇಳಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ನಾನು ಪಾಲು ಕೇಳಿದ್ದೆ, ಆದರೆ ಅವರು ನಮ್ಮ ತಂದೆ-ತಾಯಿಯನ್ನು ನೋಡುತ್ತೇವೆ ಎಂದು ಹೇಳಿದ್ದರು ಎನ್ನುತ್ತಾರೆ.

೫. ೩ನೇ ಪ್ರತಿವಾದಿ ತನ್ನ ಮನೆಯ ಅಡಚಣೆಯ ಸಲುವಾಗಿ ೫ನೇ ಪ್ರತಿವಾದಿಗೆ ಜಮೀನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ೫ನೇ ಪ್ರತಿವಾದಿ ರಾಜುರವರು ೩ನೇ ಪ್ರತಿವಾದಿಯ ಹೆಂಡತಿಯ ತಮ್ಮನಾಗಿರುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.